"ಅಲ್ಲೇ ನೀನು ತಪ್ಪಿದ್ದು. ಬಹುಮಾನ ಜುಜುಬಿಯಲ್ಲ! ಬಂಪರ್ ಬಹುಮಾನದ ಮೊತ್ತ ಐದು ಲಕ್ಷ ರೂಪಾಯಿಗಳು!!"

"ನಿನ್ನ ಮಾತನ್ನು ಒಪ್ಪಿಕೊಂಡರೆ, ಒಂದು ಪ್ರಶ್ನೆ ಉದ್ಭವಿಸುತ್ತದೆ. ಯಾವ ಮಾರಾಟಗಾರ ಶೂ ಕಳವು ಮಾಡಿಸ್ತಾ ಇರೋದು? ಇಬ್ಬರೂ ಅಂಗಡಿಯವರು ಸೇರಿ ಕಳ್ಳತನ ಮಾಡುವ ಸಾಧ್ಯತೆ ಕಡಿಮೆಯಲ್ವೇ?"

"ಈ ಕೆಲ್ಸ ಮಾಡ್ತಾ ಇರೋದು ಬಸ್ ನಿಲ್ದಾಣದ ಬಳಿಯ ಅಂಗಡಿಯಾತ! ಯಾಕೆ ಗೊತ್ತೆ? ಅವನ ಅಂಗಡಿಗೆ ಶಿವದಾಸ್ ಅನ್ನುವಾತ ಸಂಶೋಧನೆಗೆಂದು ಬಂದಿದ್ದಾನೆ ಅಂತ ಹೇಳಿದ್ದಾನೆ. ಆ ಶಿವದಾಸ್ ಜೈನ್ ರಸ್ತೆಯ ಮಳಿಗೆಗೆ ತೆರಳಿಲ್ಲ. ಯಾಕೆ? ಉತ್ತರ ಸರಳ. ಆ ವ್ಯಕ್ತಿಯೇ ಕಾಲ್ಪನಿಕ! ಅಂಗಡಿಯಾತ ಯಾರದ್ದೋ ಫೋಟೊ ತೋರಿಸಿ, ಶಿವದಾಸ್ ಅಂತ ಹೇಳಿದ್ದಾನೆ. ತನ್ನ ಮೇಲೆ ಅನುಮಾನ ಬರಬಾರದೆನ್ನುವುದೇ ಉದ್ದೇಶ. ಆತನೇ ಇದರ ಹಿಂದಿರುವುದು ಅನ್ನಲು ಇನ್ನೊಂದು ಕಾರಣವೂ ಇದೆ. ಆ ಅಂಗಡಿಯವನೇ ಹೆಚ್ಚು ಶೂಗಳನ್ನು ಮಾರಿದ್ದು. ಹಾಗಾಗಿ, ಬಹುಮಾನ ಸಿಗುವ ಸಾಧ್ಯತೆ ಆತನಿಗೇ ಜಾಸ್ತಿ. ಆತ ಯಾರನ್ನೋ ಶೂ ಕದಿಯಲು ನೇಮಿಸಿರಬಹುದು."

ನನ್ನ ಮಾತುಗಳಿಗೆ ಕರಮಚಂದ ತಕ್ಷಣ ಪ್ರತಿಯಾಡಲಿಲ್ಲ. ತುಸು ಯೋಚಿಸಿ, ತುಟಿ ಎರಡು ಮಾಡಿದ, "ಅಂಗಡಿಯಾತ ಸ್ವತಃ ಕದಿಯುತ್ತಿದ್ದಾನೆಯೇ ಅಥವಾ ಯಾರನ್ನಾದರೂ ಅದಕ್ಕೆ ನೇಮಿಸಿದ್ದಾನೆಯೇ ಎನ್ನುವುದು ಈ ರಾತ್ರಿ ಪತ್ತೆಯಾಗಬಹುದು. ನಿನಗೆ ಆಸಕ್ತಿಯಿದ್ದರೆ, ನನ್ನೊಂದಿಗೆ ಬಾ".

ರಾತ್ರಿಯ ಕುತೂಹಲಕರ ಸಾಹಸವನ್ನು ಕಳೆದುಕೊಳ್ಳಲು ನಾನಂತೂ ಸಿದ್ಧನಿರಲಿಲ್ಲ.

★★★

ನಾವು ಮನೆಯಿಂದ ಹೊರಬಿದ್ದಾಗ ಗಂಟೆ ಹನ್ನೊಂದು ಸಮೀಪಿಸುತ್ತಿತ್ತು. ಕರಮಚಂದನೇ ಕಾರು ಚಲಾಯಿಸುತ್ತಿದ್ದ. ಮುಖ್ಯ ರಸ್ತೆಯ ಮುಂದಿನ ತಿರುವಿನಲ್ಲಿ ಎಡಕ್ಕೆ ಹೊರಳಿದಾಗಲೇ, ನನಗೆ ಹೊರಟಿದ್ದೆಲ್ಲಿಗೆ ಅಂತ ಹೊಳೆಯಿತು! ಮಲೆತಿರುಕಿ ಬೆಟ್ಟದ ಸನಿಹಕ್ಕೆ!!

ಕಾರನ್ನು ಸಾಕಷ್ಟು ದೂರದಲ್ಲಿ ನಿಲ್ಲಿಸಿ, ನಾವು ದಶಗಣಪತಿಯ ಮನೆಯತ್ತ ನಡೆದೇ ಹೊರಟೆವು. ಶೂ ಕದಿಯಲು ಮಧ್ಯಾಹ್ನ ವಿಫಲ ಪ್ರಯತ್ನ ನಡೆಸಿದ ಕಳ್ಳ ಈ ರಾತ್ರಿ ಮತ್ತೆ ಬರಲಿದ್ದಾನೆಯೇ? ಅದು ಕರಮಚಂದನಿಗೆ ಹೇಗೆ ಗೊತ್ತಾಯಿತು?

ದಶಗಣಪತಿಯ ಮನೆಯ ಕಾಂಪೌಂಡು ಪ್ರವೇಶಿಸಿ, ಅಲ್ಲಿದ್ದ ಬಾವಿಯ ಮರೆಯಲ್ಲಿ, ಕುಳಿತೆವು. ಆಗಸದಲ್ಲಿ ಪೂರ್ಣ ಚಂದ್ರ ನಗುತ್ತಿದ್ದ.

ಒಂದು ಗಂಟೆಯ ಹೊತ್ತಿಗೆ, ವ್ಯಕ್ತಿಯೊಂದು ಹಠಾತ್ತನೆ ಗೇಟಿನ ಬಳಿ ಪ್ರತ್ಯಕ್ಷವಾಯಿತು. ಆತ ಒಮ್ಮೆ ಅತ್ತಿತ್ತ ಕಣ್ಣು ಹರಿಸಿ, ಮೆಲ್ಲಗೆ ಪಾಗಾರವೇರಿ ಒಳಕ್ಕೆ ಜಿಗಿದ. ನಿಖರವಾದ ಗುರಿಯುಳ್ಳವನಂತೆ, ಆತ ನೇರವಾಗಿ ಚಪ್ಪಲಿ ಸ್ಟ್ಯಾಂಡಿನತ್ತ ಹೆಜ್ಜೆ ಹಾಕಿದ. ಆತ ಅದರೊಳಗಿನಿಂದ ಶೂವನ್ನು ಎತ್ತಿಕೊಂಡೊಡನೆ, ಕರಮಚಂದ ಗೂಳಿಯಂತೆ ನುಗ್ಗಿ, ಆತನನ್ನು ಬಲವಾಗಿ ಹಿಡಿದ. ಅನಿರೀಕ್ಷಿತ ಆಕ್ರಮಣದಿಂದ ಗಲಿಬಿಲಿಗೊಂಡನಾದರೂ ಆ ವ್ಯಕ್ತಿ ತಪ್ಪಿಸಿಕೊಳ್ಳಲು ಯತ್ನಿಸಿದ. ಕರಮಚಂದ ಜೇಬಿನಿಂದ ತಕ್ಷಣ ರಿವಾಲ್ವರ್ ತೆಗೆದು, ಆತನ ತಲೆಗೆ ಗುರಿಯಿಟ್ಟಾಗ ಆತ ತೆಪ್ಪಗಾದ. ದಶಗಣಪತಿಯನ್ನು ಕರೆಯಲು ಹಾಗೂ ಇನ್‌ಸ್ಪೆಕ್ಟರ್ ಡಿಸೋಜನಿಗೆ ಕರೆ ಮಾಡಲು ಕರಮಚಂದ ನನಗೆ ಸೂಚಿಸಿದ.

ನಿದ್ರೆಯಿಂದ ಎದ್ದು, ಕಣ್ಣುಜ್ಜಿಕೊಂಡು ಬಂದ ದಶಗಣಪತಿ ಅಚ್ಚರಿಯಿಂದ ನಮ್ಮನ್ನು ದಿಟ್ಟಿಸಿದ. ಅವನಿಗೆ ಸಂಕ್ಷಿಪ್ತವಾಗಿ ನಡೆದುದನ್ನು ಕರಮಚಂದ ಅರುಹಿದ. ಹದಿನೈದು ನಿಮಿಷಗಳಲ್ಲಿ ಡಿಸೋಜನ ಜೀಪು ಗೇಟಿನ ಮುಂದೆ ನಿಂತಿತು.